ಅಧ್ಯಕ್ಷರು : ಸ್ಥಳಾಂತರ ಮಾಡಲಾಗಿದೆ ಎಂದು ಕೇಳಿದ್ದಾರೆ, ಇದು ಬಹಳ ಸಣ್ಣ ವಿಚಾರ ಇದೆ, ಉತ್ತರ ಕೊಡಿ. ಮಾನ್ಯ ಸದಸ್ಯರೇ, ಮೊದಲಿಗೆ ಮಾನ್ಯ ಸಚಿವರ ಗಮನ ಸೆಳೆಯಿರಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:– ಸುಳ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕಾಣಿಯೂರುನಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನುಬೆಳಂದೂರಿಗೆ ಸ್ಥಳಾಂತರಿಸುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ.

ಶ್ರೀ ಎಸ್. ಅಂಗಾರ : ಸುಳ್ಯ ವಿಧಾನಸಭ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕಾಣಿಯೂರುನಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸರ್ಕಾರವು 2009–10ನೇ ಸಾಲಿನಿಂದ ಪುತ್ತೂರು ತಾಲ್ಲೂಕು, ಕಾಣಿಯೂರು ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡಿದ್ದು, ಅದೇ ಸಾಲಿನಿಂದ ಪ್ರಾರಂಭಿಸಲಾಗಿತ್ತು.

ದಿನಾಂಕ : 14.12.2009 ರಲ್ಲಿ ಆರ್.ಐ.ಡಿ.ಎಫ್.ನಬಾರ್ಡ್–15ರಡಿ ರೂ.121.00 ಲಕ್ಷಗಳ ಅನುದಾನವನ್ನು ಒದಗಿಸಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗಿತ್ತು. ಸದರಿ ಕಾಲೇಜಿನ ಕಟ್ಟಡಕ್ಕೆ ನಿವೇಶನ ಪಡೆಯಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿತ್ತು, ಆದರೆ ನಿವೇಶನ ಲಭ್ಯವಾಗದ ಕಾರಣ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿರುವುದಿಲ್ಲ.

ದಿನಾಂಕ: 30.01.2014 ರಲ್ಲಿ ಸರ್ಕಾರಿ ಕಿರಿಯ ಶಾಲೆ, ಬೆಳಂದೂರು ಈ ಶಾಲೆಗೆ ಸೇರಿದ 05 ಎಕರೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹಸ್ತಾಂತರಿಸಲಾಯಿತು.

ಇಲಾಖಾ ಕ್ಷೇತ್ರಾಧಿಕಾರಿಗಳ ಶಿಫಾರಸ್ಸಿನನ್ವಯ ಸರ್ಕಾರವು ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2013, ದಿನಾಂಕ : 28.05.2014ರ ಆದೇಶದಲ್ಲಿ ಕಾಣಿಯೂರಿನಲ್ಲಿ ನಡೆಯುತ್ತಿರುವ ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸಲಾಯಿತು.

ವಿದ್ಯಾರ್ಥಿಗಳಿಗೆ ಉತ್ತಮ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ನಬಾರ್ಡ್ ಅಡಿಯಲ್ಲಿ ಮಂಜೂರಾಗಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವ ದೃಷ್ಟಿಯಿಂದ ಕಾಣೆಯೂರು ಕಾಲೇಜನ್ನು ಬೆಳಂದೂರಿಗೆ ಸ್ಥಳಾಂತರಿಸಲಾಗಿದೆ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, 2009ರಲ್ಲಿ ಕಾಲೇಜು ಪ್ರಾರಂಭವಾಗಿತ್ತು. ಅಂದಿನಿಂದ ಇವತ್ತಿನವರೆಗೆ ಆ ಕಾಲೇಜು ಕಾಣಿಯೂರಿನಲ್ಲಿ ನಡೆಯುತ್ತಿತ್ತು, ನಾನು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷನಾಗಿದ್ದೇನೆ. ಹಾಗೆಯೇ ಆ ಕ್ಷೇತ್ರದ ಶಾಸಕ ಕೂಡ ಆಗಿದ್ದೇನೆ. ನನ್ನ ಗಮನಕ್ಕೆ ಯಾವುದೇ ವಿಚಾರಗಳು ಬಂದಿಲ್ಲ. ಎರಡನೆಯದಾಗಿ, ಈ ಒಂದು ಕಾಲೇಜನ್ನು ಸ್ಥಳಾಂತರ ಮಾಡುವ ಸಂಬಂಧವಾಗಿ ಈ ಕಾಲೇಜಿಗೆ ಮೂರು ಜನರನ್ನು ಕಾಲೇಜು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಮಾನ್ಯ ರಮಾನಾಥ್ ರೈ ರವರು ಇದ್ದಾರೆ. ಅಂದರೆ, ದಿನಾಂಕ: 6–5–14ರಲ್ಲಿ ಬಂಟ್ವಾಳ ತಾಲ್ಲೂಕು ಪಂಚಾಯತ್‌ನ ಸಾಮರ್ಥ್ಯ ಸೌಧದಲ್ಲಿ ನಡೆದಂಥ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು..

ಅಧ್ಯಕ್ಷರು : ಈಗ ಅದನ್ನು ಅಲ್ಲಿಯೇ ಮುಂದುವರಿಸಬೇಕೆ ?

ಶ್ರೀ ಎಸ್. ಅಂಗಾರ : ಆ ಕಾಲೇಜನ್ನು ಕಾಣಿಯೂರಿನಲ್ಲಿಯೇ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರೇ, ಅಲ್ಲಿಯೇ ಮಾಡುವುದಕ್ಕೆ ಆಗುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಹೇಳಿ.

ಶ್ರೀ ಎಸ್.ಅಂಗಾರ : ಮಾನ್ಯ ಅಧ್ಯಕ್ಷರೆ, ಬೇರೆ ಕಡೆಗೆ ಶಿಫ್ಟ್ ಮಾಡುವುದಕ್ಕೆ ಜನರ ವಿರೋಧ ಇರುವುದರಿಂದ ಇಲ್ಲಿಯವರೆಗೆ ಸ್ಥಳಾಂತರ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ, ಅಲ್ಲಿಯೇ ಮುಂದುವರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಗೌರವಾನ್ವಿತ ಶಾಸಕರಿಗೆ ಗೊತ್ತಿಲ್ಲದೆ ಇರಬಹುದು, ಆದರೆ ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ದಿನಾಂಕ: 18.06.2014ರಲ್ಲಿ ಪುತ್ತೂರಿನ Assistant Commissioner ರವರು ಇದರ

ಬಗ್ಗೆ ಒಂದು ಸಭೆಯನ್ನು ಮಾಡಿದ್ದರು. ಆ ಸಭೆಯಲ್ಲಿ ಶಿಕ್ಷಣ ಅಧಿಕಾರಿಗಳು ಮತ್ತು ತಾವೂ ಸಹ ಇದ್ದೀರಿ. ನನ್ನ ಹತ್ತಿರ ಇರುವ ರೆಕಾರ್ಡ್ ಪ್ರಕಾರ ಹೇಳುತ್ತಿದ್ದೇನೆ ಹೊರತು ತಪ್ಪು ಮಾಹಿತಿ ಹೇಳುತ್ತಿಲ್ಲ. ಹಾಗೆಯೇ ಎರಡೂ ಗ್ರಾಮದ ಗ್ರಾಮಸ್ಥರೂ ಸಹ ಆ ಸಭೆಯಲ್ಲಿದ್ದರು. ಅಲ್ಲಿ ಜಾಗಕ್ಕೋಸ್ಕರ ಹಲವಾರು ವರ್ಷಗಳಿಂದ ಪ್ರಯತ್ನ ಮಾಡಿದರೂ ಕೂಡ ಇವತ್ತಿಗೂ ಸಹ ಜಾಗ ಸಿಗುತ್ತಿಲ್ಲ. ಈಗ 10 ಕಿ.ಮೀ. ದೂರದಲ್ಲಿ ಏನೂ ಮಾಡುತ್ತಿಲ್ಲ. ಕೇವಲ 1.5 ಕಿ.ಮೀ. ಮಾತ್ರ ದೂರದಲ್ಲಿದೆ. ನೀವು ಎಲ್ಲಿ ಕೇಳುತ್ತೀರೋ ಅಲ್ಲಿ ಜಾಗ ಕೊಡುತ್ತೀರಾ? ಮಿನಿಸ್ಟರ್ ಆಗಿ ನಾನೇ ಪ್ರಯತ್ನ ಮಾಡಿದ್ದೇನೆ. ಈಗ ಅಂತಿಮವಾಗಿ ಈ ರೀತಿಯಾಗಿ ಮಾಡಲಾಗುತ್ತಿದೆ. 2009ನೇ ಸಾಲಿನಲ್ಲಿ ಮಂಜೂರಾಗಿದ್ದ ಕಾಲೇಜಿಗೆ ಅದೇ ವರ್ಷದಲ್ಲಿ 1.23 ಕೋಟಿ ರೂಪಾಯಿ ಮಂಜೂರಾಗಿದೆ. ಅವತ್ತಿನಿಂದ ಅಲ್ಲಿ ಕಟ್ಟಡ ಕಟ್ಟವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಅದರೆ, ಜಾಗ ಸಿಗುತ್ತಿಲ್ಲ. ಇವರು ಹೇಳುತ್ತಿರುವ ಜಾಗ social forest land ಆಗಿದೆ. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತ್ತೇನೆಂದರೆ, ಈ ಲ್ಯಾಂಡ್ ಅನ್ನು ಬಿಡಿಸಿಕೊಳ್ಳವುದು ಬಹಳ ಕಷ್ಟದ ಕೆಲಸವಾಗಿದೆ. ಆದ್ದರಿಂದ, 1.5 ಕಿ.ಮೀ. ದೂರದಲ್ಲಿ 5 ಎಕರೆ ಜಮೀನನ್ನು ಕೊಟ್ಟಿದ್ದು, ಪಂಚಾಯಿತಿಯಲ್ಲಿ ನಿರ್ಣಯ ಮಾಡಿ ಮತ್ತೆ 6 ಎಕರೆ ಜಮೀನು ಕೊಡುತ್ತೇವೆಂದು ಹೇಳಿದ್ದಾರೆ. ಈ ಒಂದು ಕಾರಣದಿಂದ ಶಿಫ್ಟ್ ಮಾಡಲಾಗಿದೆ ವಿನಃ ಬೇರೆ ಯಾವುದೇ ಕಾರಣದಿಂದ ಶಿಫ್ಟ್ ಮಾಡಿಲ್ಲ. ಆದ್ದರಿಂದ, ತಾವು ಇದಕ್ಕೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ ಅಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಕಾಲೇಜಿನ ಒಳ್ಳೆಯ ಕಟ್ಟಡ ಹಾಗೂ ಮೂಲಭೂತ ಸೌಕರ್ಯ ಬೇಕಲ್ಲವೇ? ಜಾಗ ಸಿಗದೇ ಇರುವುದಿಂದ ಹಣ ಕೂಡ ವಿನಿಯೋಗ ಆಗುತ್ತಿಲ್ಲ ಹಾಗೆಯೇ ಮೂಲಭೂತ ಸೌಕರ್ಯ ಕೂಡ ಒದಗಿಸಿಕೊಡುವುದಕ್ಕೆ ಆಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ರಾಜಕಾರಣ ಬಂದಿದೆ. ಈಗ 5 ಎಕರೆ ಜಮೀನು ತೋರಿಸುವ ಕಡೆ ಮಾದರಿ ಶಾಲೆ ಮಾಡಬೇಕೆಂದು ಅಲ್ಲಿನ ಡಿಡಿಪಿಐ ನವರು ನಿರ್ಧಾರ ಕೈಗೊಂಡಿದ್ದಾರೆ. ಆದ್ದರಿಂದ, ಅವರು ಕೊಡುತ್ತಿಲ್ಲ. ಇಲ್ಲಿ ರಾಜಕಾರಣ entry ಆಗಿದೆ. ಈಗ ಒಂದು ಸಣ್ಣ

ಗುಡಿಸಲಿಗೆ ಕಾಲೇಜನ್ನು ಶಿಫ್ಟ್ ಮಾಡುತ್ತಿದ್ದಾರೆ. ನೀವು ಹೊಸದಾಗಿ ಕಟ್ಟಡ ನಿರ್ಮಾಣ ಮಾಡಿದ್ದರೆ ಬೇರೆ ವಿಷಯ ಇರುತ್ತಿತ್ತು. ಆದರೆ, ಒಂದು ಸಣ್ಣ ಗುಡಿಸಲಿಗೆ ಶಿಫ್ಟ್ ಮಾಡುತ್ತಿದ್ದಾರೆ. ಆದರೆ, ಮೊದಲು ಇರುವ ಕಡೆ ಕಟ್ಟಡ ಇದೆ. ಮಾನ್ಯ ಅಧ್ಯಕ್ಷರೆ, ಎಂಥ ಕಡೆ ಕಾಲೇಜು ನಡೆಸುತ್ತಿದ್ದಾರೆಂಬ ಫೋಟೋವನ್ನು ತಾವು ದಯಮಾಡಿ ನೋಡಬೇಕು

(ಈ ಹಂತದಲ್ಲಿ ಫೋಟೋವನ್ನು ಮಾನ್ಯ ಸಭಾಧ್ಯಕ್ಷರಿಗೆ ತೋರಿಸಲಾಯಿತು)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ ಇದು ಕೇವಲ ಒಂದು ಶೆಡ್‌ನಲ್ಲಿ ಹೋಗಿ ವಿದ್ಯಾರ್ಥಿಗಳು ಕುಳಿತುಕೊಳ್ಳಬೇಕಾಗಿದೆ. ಈಗ ಕಾಲೇಜು ನಡೆಯುತ್ತಿದೆ. ತರಾತುರಿಯಲ್ಲಿ ಏಕೆ ಶಿಫ್ಟ್ ಮಾಡಿದ್ದೀರಿ? ಮೊದಲು ಬಿಲ್ಡಿಂಗ್ ಕಟ್ಟಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ Deputy Commissioner ರವರು ವರದಿ ಕಳುಹಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈ ವಿಷಯವನ್ನು ನೀವು ರಾಜಕೀಯ ಮಾಡುವುದಕ್ಕೆ ಹೋಗುತ್ತಿದ್ದೀರಿ.

ಶ್ರೀ ವಿ. ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಂಗಾರರವರು ಕಾಲೇಜು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಆದರೆ, ಅವರ ಗಮನಕ್ಕೆ ಬಾರದೆ ಮಾಡುತ್ತಿರುವುದು ಸರಿಯಲ್ಲ. ಇಲ್ಲಿಯೇ ಜಾಗ ಕೊಡಿಸುತ್ತೇವೆಂದು ಮಾನ್ಯ ಶಾಸಕರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಮಾನ್ಯ ಶಾಸಕರನ್ನು ಕೇಳುವುದಿಲ್ಲವೆಂದರೆ ಹೇಗೆ ?

ಶ್ರೀ ಜಗದೀಶ್ ಶೆಟ್ಟರ್ : ನಾಳೆದಿವಸ ನಿಮ್ಮ ಅಧಿಕಾರಿಯನ್ನು ಕರೆಸಿ ನಾವು ಸಹ ಬರುತ್ತೇವೆ. ಅಲ್ಲಿಯವರೆಗೆ ಅದನ್ನು ತಾತ್ಕಾಲಿಕವಾಗಿ ಒಂದು ವಾರ ತಡೆಹಿಡಿಯಿರಿ. ಅಲ್ಲಿಯವರೆಗೆ ಯಾವುದೇ ರೀತಿಯ ಅನಾಹುತವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಬೇಕಾದರೆ ಈ ಬಗ್ಗೆ ಒಂದು ಸಭೆಯನ್ನು ಕರೆಯುತ್ತೇನೆ. ಆ ಸಂದರ್ಭದಲ್ಲಿ ನಿಮ್ಮನ್ನು ಮತ್ತು ಶಾಸಕರನ್ನು ಹಾಗೂ ಜಿಲ್ಲಾ ಸಚಿವರು ಮತ್ತು ಅಧಿಕಾರಿಗಳನ್ನು ಕರೆಯುತ್ತೇನೆ. ಅಲ್ಲಿ ಮಾತನಾಡೋಣ. ಇದರಲ್ಲಿ ಯಾವ politics ಇದೆ ಹೇಳಿ?

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್ : ಅಲ್ಲಿಯವರೆಗೆ ಸ್ಥಳಾಂತರ ಮಾಡುವುದನ್ನು ತಡೆಹಿಡಿಯಿರಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ತಾವು ಈ ಬಗ್ಗೆ ವಿಚಾರ ಮಾಡಬೇಕು. ಏಕೆಂದರೆ, 2009ನೇ ಸಾಲಿನಲ್ಲಿ ಆಗಿದೆ, ಈಗಾಗಲೇ 7 ವರ್ಷ ಕಳೆದು ಹೋಗಿದೆ. ಆದರೆ, ಬಿಡುಗಡೆ ಆಗಿರುವ ಹಣ ಖರ್ಚಾಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮೊದಲು ಇದ್ದ ಕಡೆಯಲ್ಲಿಯೇ ನಡೆಯಲಿ. ಆದ್ದರಿಂದ, ಶಿಫ್ಟ್ ಆಗುವುದನ್ನು ತಡೆಹಿಡಿಯಿರಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಈ ಬಗ್ಗೆ ಒಂದು ಸಭೆಯನ್ನು ಕರೆಯುತ್ತೇನೆ. ಅಲ್ಲಿಗೆ ಅಧಿಕಾರಿಗಳು ಬರುತ್ತಾರೆ ತಾವೂ ಕೂಡ ಆ ಬಗ್ಗೆ ಪರಿಶೀಲನೆ ಮಾಡಿ ಆನಂತರ ಈ ಬಗ್ಗೆ ನಿರ್ಣಯ ಮಾಡುತ್ತೇನೆ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ಅದನ್ನು ತಡೆಹಿಡಿಯಬೇಕು.

(ಗೊಂದಲ)

ಅಧ್ಯಕ್ಷರು : ಈ ಬಗ್ಗೆ ಒಂದು ಸಭೆ ಕರೆಯುತ್ತೇನೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ತಡೆಹಿಡಿಯಲಿ. ಏಕೆಂದರೆ, ಈ ಬಗ್ಗೆ ಅಲ್ಲಿ ಸ್ಟ್ರೈಕ್ ಆಗುತ್ತಿದೆ.

ಶ್ರೀ ವಿ. ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿಗಳು ಕಾಲೇಜಿಗೆ ಹೋಗಬೇಕೋ ಅಥವಾ ಸ್ಟ್ರೈಕ್ ಮಾಡಿಕೊಂಡು ಇರಬೇಕೇ ಎಂಬುವರ ಬಗ್ಗೆ ಸ್ಪಷ್ಟಪಡಿಸಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದೊಂದು ಶಿಕ್ಷಣ ಸಂಸ್ಥೆ. 5 ವರ್ಷದಿಂದ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ಆಗಲಿಲ್ಲ. ಇದಕ್ಕೆ ಬೇಕಾಗಿರುವ ಹಣ ಹಾಗೆಯೇ ಇದೆ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಅಲ್ಲಿ ವಿದ್ಯಾರ್ಥಿಗಳನ್ನು ಒತ್ತಾಯವಾಗಿ ಕರೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ, ಅದನ್ನು ತಡೆಹಿಡಿಯಬೇಕೆಂದು ಕೇಳುತ್ತಿದ್ದೇವೆ. ಕೇವಲ 1.5 ಕಿ.ಮೀ. ಇದೆ ಎಂದು ಹೇಳುತ್ತಿದ್ದಾರೆ. ಆದರೆ, ಅದು ಸುಮಾರು 3 ಕಿ.ಮೀ.ದೂರ ಇದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರೇ, ಈ ಬಗ್ಗೆ ನಾಳೆದಿವಸ ಮೀಟಿಂಗ್ ಕರೆಯಿರಿ.

ಶ್ರೀ ವಿ. ಸುನೀಲ್ ಕುಮಾರ್ : ಅಲ್ಲಿಯವರೆಗೆ ತಡೆಹಿಡಿಯಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರದ ಆದೇಶವನ್ನು ನಾನು ತಡೆಹಿಡಿದಿದ್ದೇನೆಯೇ? ಆದೇಶ ಆಗಿದೆ, ಇದರ ಬಗ್ಗೆ ಸಭೆ ಮಾಡಿ ನಿಮ್ಮನ್ನು ಕರೆದು ತೀರ್ಮಾನ ತೆಗೆದುಕೊಳ್ಳುತ್ತೇನೆಂದು ನಾನು ಮಿನಿಸ್ಟರ್ ಆಗಿ ಭರವಸೆ ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾಳೆಯವರೆಗೆ ಯಥಾಸ್ಥಿತಿಯನ್ನು ಕಾಯ್ದಿಕೊಂಡು ಹೋಗುತ್ತೇನೆಂದು ಹೇಳಿ.

ಅಧ್ಯಕ್ಷರು : ನಾಳೆ ಸಭೆ ಮಾಡಿ.

ಶ್ರೀ ವಿ. ಸುನೀಲ್ ಕುಮಾರ್ : ತಡೆಹಿಡಿಯಬೇಕು. ಏಕೆಂದರೆ, ಅಲ್ಲಿ 150 ಜನ ವಿದ್ಯಾರ್ಥಿಗಳಿದ್ದಾರೆ. ಅವರು ಎಲ್ಲಿಗೆ ಹೋಗಬೇಕು ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರು ಅಲ್ಲಿ ಸ್ಟ್ರೈಕ್ ಆಗುತ್ತದೆ. ಅನಗತ್ಯವಾಗಿ ಸಾಮಾಜಿಕ ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ನಾಳೆ ಸಭೆ ಸೇರಿ.

ಶ್ರೀ ಎಸ್ .ಅಂಗಾರ : ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ತಡೆಹಿಡಿಯಬೇಕು

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್ : ಅಲ್ಲಿಗೆ ವಿದ್ಯಾರ್ಥಿಗಳು ಹೋಗುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಈ ಬಗ್ಗೆ ನಾಳೆದಿವಸ ತೀರ್ಮಾನ ಆಗದೆ ಇದ್ದಲ್ಲಿ ಈ ವಿಷಯವನ್ನು ಸದನದಲ್ಲಿ ಮತ್ತೆ ಪ್ರಸ್ತಾಪ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅಲ್ಲಿ ಸ್ಟ್ರೈಕ್ ನಡೆಯುತ್ತಿದೆ.

ಅಧ್ಯಕ್ಷರು : ನಾಳೆ ಸಭೆ ಮಾಡುತ್ತಾರೆ.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ಅದನ್ನು ತಡೆಹಿಡಿಬೇಕು. ಅಲ್ಲಿನ ಪರಿಸ್ಥಿತಿಯನ್ನು ತಾವು ಅವಲೋಕಿಸಿ.

ಅಧ್ಯಕ್ಷರು : ನಾಳೆ ಎಲ್ಲರನ್ನು ಕರೆದು ಸಭೆ ಮಾಡುತ್ತಾರೆ. ಅಲ್ಲಿ ತೀರ್ಮಾನವಾಗದೆ ಇದ್ದಲ್ಲಿ ಮತ್ತೆ ಇಲ್ಲಿ ಪ್ರಸ್ತಾಪ ಮಾಡಿ.

ಶ್ರೀ ವಿ. ಸುನೀಲ್ ಕುಮಾರ್ : ತೀರ್ಮಾನವಾಗುವವರೆಗೆ ತಡೆಹಿಡಿಯುವುದಕ್ಕೆ ತೊಂದರೆ ಏನು ?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿಯವರೆಗೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಿ ಎಂದು ಹೇಳುತ್ತಿದ್ದೇವೆ. ಅದನ್ನು ಮಾಡುವುದಕ್ಕೆ ಅವರು ತಯಾರಿಲ್ಲವೆಂದರೆ ಹೇಗೆ ?

ಅಧ್ಯಕ್ಷರು : ಮಾನ್ಯ ಸಚಿವರೇ, ಅದರಲ್ಲಿ ಏನಿದೆ, ಮೊದಲು ಆ ಬಗ್ಗೆ ಉತ್ತರ ಹೇಳಿ.

ಶ್ರೀ ಆರ್. ವಿ.ದೇಶಪಾಂಡೆ : ಇದೊಂದು educational institution, ಇದಕ್ಕೆ forcibly ಮಾಡುವುದಕ್ಕೆ ಬರುತ್ತದೆಯಾ ? ಯಾವುದೇ ತರಹ ಕ್ರಮ ತೆಗೆದುಕೊಳ್ಳುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇಂತಹ ಒಂದು ಗುಡಿಸಲಲ್ಲಿ ನೀವು ಕಾಲೇಜು ನಡೆಸುತ್ತೀರಾ ?

(ಈ ಹಂತದಲ್ಲಿ ಪತ್ರಿಕೆಯಲ್ಲಿ ಬಂದಿರುವ ಫೋಟೋವನ್ನು ತೋರಿಸಲಾಯಿತು)

ಶ್ರೀ ಆರ್.ವಿ. ದೇಶಪಾಂಡೆ : ನನಗೆ Deputy Commissionerರವರು ಈಗ shift ಮಾಡುತ್ತಿರುವ ಸ್ಥಳ ಯೋಗ್ಯವಾಗಿದೆ ಎಂದು ಹೇಳಿದ್ದಾರೆ. ನಿಮ್ಮ ಶಾಸಕರು ಇಲ್ಲವೆಂದು ಹೇಳುತ್ತಿದ್ದಾರೆ ಅದನ್ನು ನಾನು ನಂಬುತ್ತೇನೆ. ಪುತ್ತೂರು AC ಯವರು ಮೀಟಿಂಗ್ ಮಾಡಿದ್ದಾರೆ ಮಾನ್ಯ ಶಾಸಕರು ಅಲ್ಲಿ present ಇದ್ದರು.

ಅಧ್ಯಕ್ಷರು : ಮುಂಚೆ ಅದು ಪ್ರಾರಂಭವಾಗಿತ್ತಲ್ಲಾ ?

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಮೇಲೆ ವಿಶ್ವಾಸವಿಡಬೇಕು ಅಲ್ಲವೆ? ಶಾಸಕರು ನಮ್ಮ ಮೇಲೆ ವಿಶ್ವಾಸವಿಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿಯವರೆಗೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಿ.

ಅಧ್ಯಕ್ಷರು : ಏನು ಓಡಿ ಹೋಗುತ್ತದೆ ? ನಾಳೆ ಸಭೆಯನ್ನು ಕರೆಯಿರಿ

ಶ್ರೀ ಜಗದೀಶ್ ಶೆಟ್ಟರ್ : ತರಾತುರಿಯಿಂದ ಶಿಫ್ಟ್ ಮಾಡುತ್ತಿದ್ದಾರೆ. ಫೋಟೋ ನೋಡಿ ಗುಡಿಸಲು ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಲ್ಲಿ law and order problem ಆಗುತ್ತದೆ. ದಿನ ಬೆಳಗಾದರೆ ಹೋರಾಟ ಪ್ರತಿಭಟನೆಗಳು ನಡೆಯುತ್ತಿವೆ. ಅನಗತ್ಯವಾಗಿ ಸಾಮಾಜಿಕ ಸಾಮರಸ್ಯ ಕೆಡುತ್ತಿದೆ. ಇದರಿಂದ ದೊಡ್ಡ ಸಾಮಾಜಿಕ ತೊಂದರೆ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಇಷ್ಟೊಂದು detail ಆಗಿ ಚರ್ಚೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ.

(ಈ ಹಂತದಲ್ಲಿ ಮಾನ್ಯ ಶಾಸಕರಾದ ಎಸ್. ಅಂಗಾರರವರು ಸದನದ ಬಾವಿಗೆ ಧರಣಿಗೆ ಬಂದರು)

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಶಾಸಕರ ಗಮನಕ್ಕೆ ಬಂದಿಲ್ಲ, ಶಾಸಕರನ್ನು ಇಟ್ಟುಕೊಂಡು ಏನು ಬೇಕಾದರೂ ಮಾಡಬಹುದಾ, ಸರ್ ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಎಸ್. ಅಂಗಾರರವರು 5ನೇ ಬಾರಿಗೆ ಆರಿಸಿ ಬಂದಿರುವ ಶಾಸಕರು ಅವರ ಗಮನಕ್ಕೆ ಬಂದಿಲ್ಲವೆಂದರೆ...

ಶ್ರೀ ಜಗದೀಶ್ ಶೆಟ್ಟರ್ : ಇದು ಸರಿ ಅಲ್ಲ, ನಾಳೆಯವರೆಗೆ ಇದನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡು ಹೋಗುವುದಕ್ಕಾಗುವುದಿಲ್ಲವೆಂದರೆ ಹೇಗೆ ? ಇದು ನೋಡಿ ಶೆಡ್ ತರಹ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಜಿಲ್ಲಾ ಉಸ್ತುವಾರಿ ಸಚಿವರು ಇದ್ದಾರೆ... ಕಾಲೇಜು ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರು ಯಾರು ?

ಅಧ್ಯಕ್ಷರು : ನಾಳೆ ಇದರ ಬಗ್ಗೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿಯವರೆಗೆ ಇದನ್ನು ತಡೆಹಿಡಿಯಲಿ. ಯಥಾಸ್ಥಿತಿ ಕಾಯ್ದುಕೊಂಡು ಹೋಗಲಿ.

ಅಧ್ಯಕ್ಷರು : ವಾಪಸ್ಸು ಮತ್ತೆ ಬರದೆ ಹೋದರೆ ಇಲ್ಲಿ ಪ್ರಸ್ತಾಪ ಮಾಡಿ ಆಗ ಇಲ್ಲಿ ಒಂದು ತೀರ್ಮಾನಕ್ಕೆ ಬರೋಣ.

ಶ್ರೀ ಜಗದೀಶ್ ಶೆಟ್ಟರ್ : ನೀವು ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವುದಕ್ಕೆ ತಯಾರಿಲ್ಲ. ನೀವು ಸಚಿವರು ನಿಮಗೆ ಅಷ್ಟು ಪವರ್ ಇಲ್ಲವೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿರ್ಣಯವಾಗುವ ತನಕ ಕಾಣಿಯೂರಿನಲ್ಲಿ ಮುಂದುವರೆಸುತ್ತೇವೆಂದು ಹೇಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮಗೆ ಸರಿ ಅನಿಸಿದರೆ ನೀವು ಶಿಫ್ಟ್ ಮಾಡಿ. ಅಲ್ಲಿಯವರೆಗೆ ನೀವು ಇಲ್ಲಿಯೆ ಮುಂದುವರೆಸಿ. ನಿಮಗೆ convince ಆಗುವವರೆಗೆ

ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಿ. ಅಷ್ಟನ್ನು ಮಾಡುವುದಿಲ್ಲವೆಂದರೆ ಹೇಗೆ ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾಣಿಯೂರಿನಲ್ಲಿ ಮುಂದುವರೆಸುತ್ತೇವೆಂದು ಹೇಳಲಿ, ದಿನಾ ಬೆಳಗ್ಗೆ ಪ್ರತಿಭಟನೆಗಳು ನಡೆಯುತ್ತಿವೆ. strike ಆಗುತ್ತಿವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ಮುದ್ದಾಮ್ ರಾಜಕಾರಣ ಇದೆ ಸರ್.

ಅಧ್ಯಕ್ಷರು : ಅದು ಇರಬಹುದು.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ಅವರು ಒಂದು ಮಾತನ್ನೂ ಹೇಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಇದು ನಾಳೆ ಏನು ಬಗೆಹರಿಯಸದೆ ಹೋದರೆ...

ಶ್ರೀ ಆರ್.ವಿ. ದೇಶಪಾಂಡೆ : ಇದರಲ್ಲಿ ಏನು ರಾಜಕಾರಣ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ನೀವು ರಾಜಕಾರಣ ಮಾಡಿಲ್ಲವೇ ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಶಾಸಕರು ಮಾತನಾಡಿದ್ದಾರೆ, ನಿಮ್ಮ ಎಂ.ಪಿ.ಯವರು ನನ್ನ ಜೊತೆ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ರಾಜಕಾರಣ ಮಾಡಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : Leave the problem to me. Have faith in me ಎಂದು ಹೇಳಿರುತ್ತೇನಲ್ಲಾ? ಅಲ್ಲಿಯವರೆಗೆ ನೀವು ವಿಶ್ವಾಸವನ್ನು ಇಡಿ.

(ಗೊಂದಲ)

ಅಧ್ಯಕ್ಷರು : ಇದು ನಾಳೆ ಬಗೆಹರಿಯದಿದ್ದರೆ ಇದನ್ನು ಮತ್ತೆ ಮಾಡೋಣ ಬಿಡಿ. ಆಯಿತು, ನೀವು ನಿಮ್ಮ ಸ್ಥಾನಕ್ಕೆ ಬನ್ನಿ.

(ಈ ಹಂತದಲ್ಲಿ ಎಸ್. ಅಂಗಾರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಬಂದರು)

ಅಧ್ಯಕ್ಷರು : ಮಾನ್ಯ ಬೋಪಯ್ಯನವರೆ, ನಿಮ್ಮ ಗಮನ ಸೆಳೆಯುವ ಸೂಚನೆಯ ವಿಷಯ ಬೇಡಿಕೆ ಮೇಲೆ ಚರ್ಚೆ ಇದೆ.

ಶ್ರೀ ಕೆ.ಜಿ. ಬೋಪಯ್ಯ : ನಾನು ಕೇಳಿರುವುದೆ ಬೇರೆ ಇವರ ವಿಷಯವೇ ಬೇರೆ ಇದೆ. ನಾನು ಕೇಳಿದ್ದು ಪಂಚಾಯಿತಿಯಲ್ಲಿ ಅವರಿಗೆ ಬೇಕಾದ ಇಂಜಿನಿಯರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಅವರು ಆ ಕೆಲಸವನ್ನೆಲ್ಲಾ ಅವರು certify ಮಾಡಿಕೊಳ್ಳುತ್ತಿದ್ದರು.

ಅಧ್ಯಕ್ಷರು : ಇದನ್ನೇ ನಾಳೆ ನೀವು ದೀರ್ಘವಾಗಿ ಹೇಳಿ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ : ಆಯಿತು.

ಅಧ್ಯಕ್ಷರು : OK.

2) **ವಿಷಯ :** ಕರ್ನಾಟಕ ರಾಜ್ಯದಲ್ಲಿರುವ ದಾಖಲೆರಹಿತ ಗ್ರಾಮಗಳಾದ ಹಟ್ಟಿ, ತಾಂಡಾ, ಹಾಡಿ ಹಾಗೂ ಕ್ಯಾಂಪ್ ಕಾಲೋನಿ, ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ:

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ) : ಕರ್ನಾಟಕ ರಾಜ್ಯದಲ್ಲಿರುವ ದಾಖಲೆರಹಿತ ಗ್ರಾಮಗಳಾದ ಹಟ್ಟಿ, ತಾಂಡಾ, ಹಾಡಿ ಹಾಗೂ ಕ್ಯಾಂಪ್ ಕಾಲೋನಿ, ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ರಾಜ್ಯದಲ್ಲಿರುವ ಲಂಬಾಣಿ ತಾಂಡಾ, ಹಾಡಿ, ಹಟ್ಟಿ, ಮಜರೆ ಗ್ರಾಮ, ಕ್ಯಾಂಪ್ ಕಾಲೋನಿ, ನಾಯಕನಹಟ್ಟಿ, ಗೊಲ್ಲರಹಟ್ಟಿ, ಹ್ಯಾಮ್ಲೆಟ್ ಹಾಗೂ ಬಸ್ತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವ ಬಗ್ಗೆ ಸರ್ಕಾರದಿಂದ ಆದೇಶ ಸಂಖ್ಯೆ :ಕಂಇ ೪೬ ಭೂದಾಪ ೨೦೧೩, ದಿನಾಂಕ: ೨೦.೦೭.೨೦೧೩ನ್ನು ಹೊರಡಿಸಲಾಗಿದ್ದು ಈ ಆದೇಶದಲ್ಲಿ ೫೦ಕ್ಕಿಂತ ಹೆಚ್ಚು ಕುಟುಂಬಗಳಿರುವ ಹಾಗೂ ೨೫೦ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ